# Akashvani : Bangalore
## National Bulletin In Kannada
## 13.01.2025 / 13.10 hrs

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

**13.01.2025 / 13.10  hrs**

**<><*<><>*><>**

ಮುಖ್ಯಾಂಶಗಳು

೧. ಕಾಶ್ಮೀರದಲ್ಲಿಂದು ನೂತನ ಸೋನಮಾರ್ಗ್ ಸುರಂಗ ಮಾರ್ಗವನ್ನು ರಾಷ್ಟ್ರಕ್ಕೆ ಸಮರ್ಪಿಸಿದ ಪ್ರಧಾನಿ ನರೇಂದ್ರ ಮೋದಿ

೨. ದೇಶಾದ್ಯಂತ ಲೋಹ್ರಿ ಭೋಗಿ ಹಬ್ಬದ ಸಂಭ್ರಮ ; ರಾಷ್ಟ್ರಪತಿ, ಉಪರಾಷ್ಟ್ರಪತಿ ಸೇರಿ ಗಣ್ಯರಿಂದ ಶುಭಾಶಯ

೩. ಇದೇ ೧೫ರಂದು ಮೂರು ಐಎನ್‌ಎಸ್ ಯುದ್ಧ ನೌಕೆಗಳನ್ನು ಲೋಕಾರ್ಪಣೆಗೊಳಿಸಲಿರುವ ಪ್ರಧಾನಿ

೪. ಮಹಿಳಾ ಹಾಕಿ ಇಂಡಿಯಾ ಲೀಗ್ ಪಂದ್ಯಾವಳಿ ; ರಾಂಚಿಯಲ್ಲಿಂದು ಶ್ರಾಚಿ ರಾರ್ಹ್ ಬೆಂಗಾಲ್ ಟೈಗರ್ಸ್, ಜೆಎಸ್‌ಡಬ್ಲ್ಯೂ ಸೂರ್ಮಾ ಹಾಕಿ ಕ್ಲಬ್ ಸೆಣಸು

**<><*<><>*><>**

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರಿಂದು ಕಾಶ್ಮೀರಕ್ಕೆ ಭೇಟಿ ನೀಡಿ, ಸೋನಮಾರ್ಗ್ ಸುರಂಗ ಯೋಜನೆಯನ್ನು ಲೋಕಾರ್ಪಣೆಗೊಳಿಸಿದರು. ಇದೇ ಸಂದರ್ಭದಲ್ಲಿ ಪ್ರಧಾನಮಂತ್ರಿಯವರು ಸುರಂಗ ಮಾರ್ಗ ನಿರ್ಮಿಸಿದ ಕಾರ್ಮಿಕರನ್ನು ಭೇಟಿಯಾದರು. ಈ ಸಂದರ್ಭದಲ್ಲಿ ಕೇಂದ್ರ ಸಚಿವರಾದ ನಿತಿನ್ ಗಡ್ಕರಿ, ಡಾ. ಜಿತೇಂದ್ರ ಸಿಂಗ್, ಜಮ್ಮು-ಕಾಶ್ಮೀರ ಲೆಫ್ಟಿನೆಂಟ್ ಗವರ್ನರ್, ಮನೋಜ್ ಸಿನ್ಹಾ, ಮುಖ್ಯಮಂತ್ರಿ ಉಮರ್ ಅಬ್ದುಲ್ಲಾ, ಜಮ್ಮು-ಕಾಶ್ಮೀರ ಸಚಿವರು, ಸಂಸದರು ಮತ್ತಿತರ ಅಧಿಕಾರಿಗಳು ಉಪಸ್ಥಿತರಿದ್ದರು. ಇದೇ ವೇಳೆ ಪ್ರಧಾನಿ ಸುರಂಗ ಮಾರ್ಗದ ಪರಿಶೀಲನೆ ನಡೆಸಿದರು.

ಈ ಕುರಿತು ಒಂದು ವರದಿ

ಸುಮಾರು ೧೨ ಕಿಲೋಮೀಟರ್ ಉದ್ದದ ಸೋನಮಾರ್ಗ್ ಸುರಂಗ ಮಾರ್ಗವನ್ನು ೨ ಸಾವಿರದ ೭೦೦ ಕೋಟಿ ರೂಪಾಯಿ ವೆಚ್ಚದಲ್ಲಿ ನಿರ್ಮಿಸಲಾಗಿದೆ. ಈ ಸುರಂಗ ಯೋಜನೆ, ಶ್ರೀನಗರ - ಸೋನಮಾರ್ಗ್ ನಡುವೆ ಲೇಹ್ ಮೂಲಕ ಸಂಪರ್ಕ ಕಲ್ಪಿಸಲಿದೆ. ಈ ಸರ್ವಋತು ಮಾರ್ಗ, ಲಡಾಖ್ ವಲಯಕ್ಕೆ ಭೂಕುಸಿತ ಮತ್ತು ಹಿಮಬಂಡೆ ಪಾತಕ್ಕೆ ಪರ್ಯಾಯವಾಗಿ ಸುರಕ್ಷಿತ ಸಂಚಾರ ವ್ಯವಸ್ಥೆ ಕಲ್ಪಿಸಲಿದೆ. ಪ್ರವಾಸಿಗರಿಗೆ ಹಾಗೂ ಈ ಭಾಗದ ಆರ್ಥಿಕ ಚಟುವಟಿಕೆಗಳಿಗೆ ಇದರಿಂದ ಅತ್ಯಧಿಕ ಪ್ರಯೋಜನವಾಗಲಿದೆ. ಜೋಜಿಲ್ಲಾ ಸುರಂಗ ಮಾರ್ಗದ ಕಾಮಗಾರಿಯೂ ಪ್ರಗತಿಯಲ್ಲಿದ್ದು, ೨೦೨೮ರ ವೇಳೆಗೆ ಪೂರ್ತಿಗೊಳ್ಳುವ ನಿರೀಕ್ಷೆಯಿದೆ. ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಕಾಶ್ಮೀರ ಭೇಟಿ ಹಿನ್ನೆಲೆಯಲ್ಲಿ ಮಧ್ಯಕಾಶ್ಮೀರದ ಶ್ರೀನಗರ ಮತ್ತು ಗಂದೇರ್‌ಬಾಲ್ ಜಿಲ್ಲೆಗಳಲ್ಲಿ ವ್ಯಾಪಕ ಬಂದೋಬಸ್ತ್ ಮಾಡಲಾಗಿದೆ.

**<><*<><>*><>**

ದೇಶಾದ್ಯಂತ ವಿಶೇಷವಾಗಿ ಪಂಜಾಬ್, ಹರಿಯಾಣ, ಹಿಮಾಚಲ ಪ್ರದೇಶ, ದೆಹಲಿ, ಜಮ್ಮು ಮತ್ತು ಚಂಡೀಗಢದಲ್ಲಿ ಇಂದು ಸುಗ್ಗಿಯ ಹಬ್ಬ ಲೋಹ್ರಿಯನ್ನು ಆಚರಿಸಲಾಗುತ್ತಿದೆ. ಹಾಗೇ ದಕ್ಷಿಣ ಭಾರತದಲ್ಲಿ ಭೋಗಿಯನ್ನು ಆಚರಿಸಲಾಗುತ್ತದೆ. ರಾಷ್ಟ್ರಪತಿ ದ್ರೌಪದಿ ಮುರ್ಮು ಮತ್ತು ಉಪರಾಷ್ಟ್ರಪತಿ ಜಗದೀಪ್ ಧನ್‌ಕರ್ ಹಾಗೂ ಲೋಕಸಭಾ ಸ್ಪೀಕರ್ ಓಂ ಬಿರ್ಲಾ, ಲೋಹ್ರಿ ಸಂದರ್ಭದಲ್ಲಿ ದೇಶದ ಜನತೆಗೆ ಶುಭಾಶಯ ಕೋರಿದ್ದಾರೆ. ನಾಳೆ ಆಚರಿಸಲಾಗುವ ಮಕರ ಸಂಕ್ರಾಂತಿ, ಪೊಂಗಲ್ ಮತ್ತು ಮಾಘ ಬಿಹು ಹಬ್ಬಗಳಿಗೂ ಅವರು ಶುಭಾಶಯ ಕೋರಿದ್ದಾರೆ.  ಈ ಹಬ್ಬಗಳು ದೇಶದ ಶ್ರೀಮಂತ ಸಾಂಸ್ಕೃತಿಕ ಪರಂಪರೆಯ ಸಂಕೇತಗಳಾಗಿವೆ ಮತ್ತು ಪ್ರತಿಯೊಬ್ಬರ ಜೀವನಕ್ಕೂ ಉತ್ಸಾಹ ಮತ್ತು ಸಂತೋಷವನ್ನು ತರುತ್ತವೆ ಎಂದು ರಾಷ್ಟ್ರಪತಿಗಳು ತಮ್ಮ ಸಂದೇಶದಲ್ಲಿ ತಿಳಿಸಿದ್ದಾರೆ. ಉಪರಾಷ್ಟ್ರಪತಿ ಜಗದೀಪ್ ಧನ್‌ಕರ್ ಲೋಹ್ರಿ, ಮಕರ ಸಂಕ್ರಾಂತಿ, ಮಾಘ ಬಿಹು ಮತ್ತು ಪೊಂಗಲ್ ಸೇರಿದಂತೆ ಹಲವು ಹಬ್ಬಗಳನ್ನು ದೇಶದಲ್ಲಿ ವಿಶಿಷ್ಟ ರೀತಿಯಲ್ಲಿ ಆಚರಿಸಲಾಗುತ್ತದೆ. ಈ ಹಬ್ಬಗಳು ಸುಗ್ಗಿಯ ಸಂದರ್ಭವನ್ನು ಸಂಭ್ರಮಿಸುವ ದೇಶದ ಪರಂಪರೆಯನ್ನು ಪ್ರತಿನಿಧಿಸುತ್ತದೆ. ಹಬ್ಬದ ಶುಭಾಯ ಕೋರಿರುವ ಕೇಂದ್ರ ಗೃಹ ಸಚಿವ ಅಮಿತ್ ಶಾ, ಈ ಹಬ್ಬ ಎಲ್ಲರ ಬಾಳಿನಲ್ಲಿ ಸುಖ ಸಮೃದ್ಧಿಯನ್ನು ತರಲಿ ಎಂದು ಪ್ರಾರ್ಥಿಸಿದ್ದಾರೆ.

<><*<><>*><>

ಉತ್ತರಪ್ರದೇಶದ ಪ್ರಯಾಗ್‌ರಾಜ್‌ನಲ್ಲಿ, ಪುಷ್ಯಪೂರ್ಣಿಮೆಯ ದಿನವಾದ ಇಂದು ವಿಶ್ವದ ಅತಿದೊಡ್ಡ ಆತ್ಯಾಧ್ಮಿಕ ಮತ್ತು ಸಾಂಸ್ಕೃತಿಕ ಉತ್ಸವವಾದ ಮಹಾಕುಂಭಮೇಳಕ್ಕೆ ವಿದ್ಯುಕ್ತ ಚಾಲನೆ ದೊರೆತಿದೆ.  ಗಂಗಾ, ಯಮುನಾ, ಸರಸ್ವತಿ ನದಿಗಳ ತ್ರಿವೇಣಿ ಸಂಗಮದ ವಿವಿಧ ಘಾಟ್‌ಗಳಲ್ಲಿ ಲಕ್ಷಾಂತರ ಭಕ್ತರು, ಯಾತ್ರಿಕರು ದಿವ್ಯ ಅಭ್ಯಂಜನ-ಅಮೃತಸ್ನಾನದಲ್ಲಿ ನಿರತರಾಗಿದ್ದಾರೆ. ೧೪೪ ವರ್ಷಗಳಲ್ಲಿ ಒಂದು ಬಾರಿ ನಡೆಯುವ ಗ್ರಹಗಳ ಅಪರೂಪದ ಸಂಯೋಜನೆ ಈ ಬಾರಿಯ ಮಹಾಕುಂಭದ ವಿಶೇಷತೆಯನ್ನು ಹೆಚ್ಚಿಸಿದೆ. ಸುಗಮ, ಸುರಕ್ಷಿತ ಮತ್ತು ಸ್ಮರಣೀಯ ಮಹಾಕುಂಭವನ್ನು ಖಚಿತಪಡಿಸಿಕೊಳ್ಳಲು ಸರ್ಕಾರ ಸಕಲ ವ್ಯವಸ್ಥೆ ಕಲ್ಪಿಸಿದೆ. ಶ್ರದ್ಧಾಳುಗಳ ಆರೋಗ್ಯ ರಕ್ಷಣೆ, ಅನುಕೂಲ, ಸೌಕರ್ಯ ಹಾಗೂ ಇತರ ಅಗತ್ಯಗಳಿಗಾಗಿ ವ್ಯಾಪಕ ವ್ಯವಸ್ಥೆ ಮಾಡಲಾಗಿದೆ. ಈ ಸಂದರ್ಭದಲ್ಲಿ ದೇಶದ ಶ್ರೀಮಂತ ಸಂಸ್ಕೃತಿ ಹಾಗೂ ಪರಂಪರೆಯನ್ನು ಪ್ರತಿಬಿಂಬಿಸುವ ಅನೇಕ ಕಾರ್ಯಕ್ರಮ ಹಾಗೂ ತಾಣಗಳನ್ನು ಆಯೋಜಿಸಲಾಗಿದೆ. ಸುರಕ್ಷತೆಯ ದೃಷ್ಠಿಯಿಂದ, ಮಹಾಕುಂಭಕ್ಕೆ ಏಳು ಸುತ್ತಿನ ಭದ್ರತೆ ಒದಗಿಸಲಾಗಿದೆ. ದೇಶದ ಶ್ರೀಮಂತ ಸಂಸ್ಕೃತಿಯನ್ನು ಪ್ರದರ್ಶಿಸುವ ನಿಟ್ಟಿನಲ್ಲಿ ಕೇಂದ್ರ ಸಂಸ್ಕೃತಿ ಸಚಿವಾಲಯ ಪ್ರಯಾಗ್‌ರಾಜ್‌ನ ಮಹಾಕುಂಭ ನಗರದಲ್ಲಿ ರಚಿಸಿರುವ ಕಲಾಗ್ರಾಮವನ್ನು ಕೇಂದ್ರ ಸಂಸ್ಕೃತಿ ಮತ್ತು ಪ್ರವಾಸೋದ್ಯಮ ಸಚಿವ ಗಜೇಂದ್ರ ಸಿಂಗ್ ಶೇಖಾವತ್ ನಿನ್ನೆ ಸಂಜೆ ಉದ್ಘಾಟಿಸಿದರು. ಕುಂಭಮೇಳ ಹಿನ್ನೆಲೆ ಪ್ರಧಾನಿ ನರೇಂದ್ರ ಮೋದಿ ದೇಶದ ಸಮಸ್ತ ಜನತೆಗೆ ಶುಭಾಶಯ ಕೋರಿದ್ದಾರೆ. ಮಹಾಕುಂಭಮೇಳ ದೇಶದ ಆಧ್ಯಾತ್ಮಿಕ ಪರಂಪರೆ ಸಹಕಾರ ರೂಪವಾಗಿದೆ. ಈ ಹಬ್ಬ ಎಲ್ಲರಲ್ಲೂ ಹೊಸ ಶಕ್ತಿ ಮತ್ತು ಉತ್ಸಾಹವನ್ನು ತರಲಿ ಎಂದು ಪ್ರಾರ್ಥಿಸಿದ್ದಾರೆ.

<><*<><>*><>

ಪ್ರಧಾನಿ ನರೇಂದ್ರ ಮೋದಿ ಇದೇ ೧೫ ರಂದು ಮಹಾರಾಷ್ಟ್ರ ಪ್ರವಾಸ ಕೈಗೊಳ್ಳಲಿದ್ದು, ಮುಂಬೈನ ನೌಕಾನೆಲೆಯಲ್ಲಿ ಕಾರ್ಯಾರಂಭ ಮಾಡಲಿರುವ ಮೂರು ಮುಂಚೂಣಿ  ಯುದ್ಧ ನೌಕೆಗಳಾದ ಐಎನ್‌ಎಸ್ ಸೂರತ್, ಐಎನ್‌ಎಸ್ ನೀಲಗಿರಿ ಮತ್ತು ಐಎನ್‌ಎಸ್ ವಾಘ್‌ಶೀರ್‌ಗಳನ್ನು ಅಂದು ರಾಷ್ಟ್ರಕ್ಕೆ ಸಮರ್ಪಿಸಲಿದ್ದಾರೆ.

ಈ ಕುರಿತು ಒಂದು ವರದಿ:

ಐಎನ್‌ಎಸ್ ಸೂರತ್, ಐಎನ್‌ಎಸ್ ನೀಲಗಿರಿ ಮತ್ತು ಐಎನ್‌ಎಸ್ ವಾಘ್‌ಶೀರ್‌ಯುದ್ಧ ನೌಕೆಗಳ ಕಾರ್ಯಾರಂಭ ರಕ್ಷಣಾ ಉತ್ಪಾದನೆ ಮತ್ತು ಕಡಲ ಭದ್ರತೆಯಲ್ಲಿ ಜಾಗತಿಕ ನಾಯಕನಾಗುವ ಭಾರತದ ದೃಷ್ಟಿಕೋನವನ್ನು ಸಾಕಾರಗೊಳಿಸುವಲ್ಲಿ ಮಹತ್ವದ ಹೆಜ್ಜೆಯಾಗಿದೆ.  ಪಿ೧೫ಬಿ ಮಾರ್ಗದರ್ಶಿ ಕ್ಷಿಪಣಿ ವಿಧ್ವಂಸಕ ಯೋಜನೆಯ ನಾಲ್ಕನೇ ಮತ್ತು ಅಂತಿಮ ಹಡಗು ಐಎನ್‌ಎಸ್ ಸೂರತ್, ವಿಶ್ವದ ಅತಿದೊಡ್ಡ ಮತ್ತು ಅತ್ಯಾಧುನಿಕ ವಿಧ್ವಂಸಕ ನೌಕೆಗಳಲ್ಲಿ ಸ್ಥಾನ ಪಡೆದಿದೆ. ಪಿ೧೭ಎ ಸ್ಟೀಲ್ತ್ ಫ್ರಿಗೇಟ್ ಯೋಜನೆಯ ಮೊದಲ ಹಡಗು ಐಎನ್‌ಎಸ್ ನೀಲಗಿರಿಯನ್ನು ಭಾರತೀಯ ನೌಕಾಪಡೆಯ ಯುದ್ಧನೌಕೆ ವಿನ್ಯಾಸ ಸಂಸ್ಥೆ ವಿನ್ಯಾಸಗೊಳಿಸಿದ್ದು, ಸುಧಾರಿತ ವೈಶಿಷ್ಟ್ಯಗಳನ್ನು ಒಳಗೊಂಡಿದೆ, ಐಎನ್‌ಎಸ್ ವಾಘಶೀರ್ ಜಲಾಂತರ್ಗಾಮಿ ನಿರ್ಮಾಣದಲ್ಲಿ ಭಾರತದ ಬೆಳೆಯುತ್ತಿರುವ ಪರಿಣತಿಯನ್ನು ಪ್ರತಿನಿಧಿಸುತ್ತದೆ.  ಭೇಟಿಯ ಸಮಯದಲ್ಲಿ, ಮುಂಬೈನ ಖಾರ್ಘರ್‌ನಲ್ಲಿ ಇಸ್ಕಾನ್ ದೇವಾಲಯವನ್ನು ಉದ್ಘಾಟಿಸಲಿದ್ದಾರೆ. ಒಂಬತ್ತು ಎಕರೆ ಪ್ರದೇಶದಲ್ಲಿ ಹರಡಿರುವ ಈ ಯೋಜನೆಯು ಹಲವು ದೇವತೆಗಳ ಮಂದಿರ, ವೇದ ಶಿಕ್ಷಣ ಕೇಂದ್ರ, ಪ್ರಸ್ತಾವಿತ ವಸ್ತುಸಂಗ್ರಹಾಲಯಗಳು ಮತ್ತು ಸಭಾಂಗಣವನ್ನು ಒಳಗೊಂಡಿದೆ.

<><*<><>*><>

೨೦೨೫ ರ ಖೋ ಖೋ ವಿಶ್ವಕಪ್ ಇಂದು ನವದೆಹಲಿಯ ಇಂದಿರಾ ಗಾಂಧಿ ಒಳಾಂಗಣ ಕ್ರೀಡಾಂಗಣದಲ್ಲಿ ಆರಂಭವಾಗಲಿದೆ. ಭಾರತೀಯ ಒಲಿಂಪಿಕ್ ಅಸೋಸಿಯೇಷನ್ ಸಹಯೋಗದೊಂದಿಗೆ ಈ ಆವೃತ್ತಿ ಆರಂಭಗೊಳ್ಳಲಿದ್ದು, ಉದ್ಘಾಟನಾ ಆವೃತ್ತಿಯಲ್ಲಿ ೨೦ ಪುರುಷರು ಮತ್ತು ೧೯ ಮಹಿಳಾ ತಂಡಗಳು ಭಾಗವಹಿಸಲಿವೆ. ಭಾರತ ಖೋ ಖೋ ಫೆಡರೇಶನ್ - ಕೆಕೆಎಫ್‌ಐ, ಪುರುಷ ಮತ್ತು ಮಹಿಳಾ ಸ್ಪರ್ಧೆಗಳಿಗೆ ತಲಾ ೧೫ ಸದಸ್ಯರ ತಂಡವನ್ನು ಪ್ರಕಟಿಸಿದೆ. ಪ್ರತೀಕ್ ವೈಕರ್ ನೇತೃತ್ವದ ಭಾರತೀಯ ಪುರುಷರ ತಂಡವು ನೇಪಾಳ, ಪೆರು, ಬ್ರೆಜಿಲ್ ಮತ್ತು ಭೂತಾನ್ ಜೊತೆ ಎ ಗುಂಪಿನಲ್ಲಿದೆ, ಪ್ರಿಯಾಂಕಾ ಇಂಗಲ್ ನೇತೃತ್ವದ ಮಹಿಳಾ ತಂಡವು ಇರಾನ್, ಮಲೇಷ್ಯಾ ಮತ್ತು ಕೊರಿಯಾ ಗಣರಾಜ್ಯದೊಂದಿಗೆ ಎ ಗುಂಪಿನಲ್ಲಿದೆ. ನಾಲ್ಕು ಗುಂಪುಗಳ ಅಗ್ರ ಎರಡು ತಂಡಗಳು ಕ್ವಾರ್ಟರ್ ಫೈನಲ್‌ಗೆ ಅರ್ಹತೆ ಪಡೆಯುತ್ತವೆ. ಜನವರಿ ೧೯ ರಂದು ಫೈನಲ್ ಪಂದ್ಯ  ನಡೆಯಲಿದೆ. ಇಂದು, ಭಾರತೀಯ ಪುರುಷರ ತಂಡವು ನೇಪಾಳ ವಿರುದ್ಧದ ಆರಂಭಿಕ ಪಂದ್ಯದೊಂದಿಗೆ ತಮ್ಮ ಅಭಿಯಾನವನ್ನು ಪ್ರಾರಂಭಿಸುತ್ತಿದೆ. ಪಂದ್ಯ ರಾತ್ರಿ ೮:೩೦ಕ್ಕೆ ಆರಂಭವಾಗಲಿದೆ. ಪಂದ್ಯದ ನೇರ ಪ್ರಸಾರವನ್ನು ಡಿಡಿ ಸ್ಪೋರ್ಟ್ಸ್ ಚಾನೆಲ್‌ನಲ್ಲಿ ವೀಕ್ಷಿಸಬಹುದಾಗಿದೆ.

<><*<><>*><>

ರಾಂಚಿಯಲ್ಲಿಂದು ನಡೆಯುವ ಮಹಿಳಾ ಹಾಕಿ ಇಂಡಿಯಾ ಲೀಗ್ ಪಂದ್ಯದಲ್ಲಿ ಶ್ರಾಚಿ ರಾರ್ಹ್ ಬೆಂಗಾಲ್ ಟೈಗರ್ಸ್, ಜೆಎಸ್‌ಡಬ್ಲ್ಯೂ ಸೂರ್ಮಾ ಹಾಕಿ ಕ್ಲಬ್ ವಿರುದ್ಧ ಸೆಣಸಲಿದೆ. ಪಂದ್ಯ ಸಂಜೆ ೦೬:೦೦ ಗಂಟೆಗೆ ಪ್ರಾರಂಭವಾಗುತ್ತದೆ. ಕಳೆದ ರಾತ್ರಿ  ಜಾರ್ಖಂಡ್‌ನ ರಾಂಚಿಯಲ್ಲಿ ಈ ಪಂದ್ಯಾವಳಿಗೆ ಅದ್ದೂರಿ ಸಮಾರಂಭದೊಂದಿಗೆ ಚಾಲನೆ ದೊರೆಯಿತು. ಶಾಸಕಿ ಕಲ್ಪನಾ ಸೊರೆನ್ ನಾಲ್ಕು ತಂಡಗಳ ನಾಯಕಿಯರೊಂದಿಗೆ ಮಹಿಳಾ ಹಾಕಿ ಇಂಡಿಯಾ ಲೀಗ್ ಟ್ರೋಫಿಯನ್ನು ಅನಾವರಣಗೊಳಿಸಿದರು. ಉದ್ಘಾಟನಾ ಪಂದ್ಯದಲ್ಲಿ, ಒಡಿಶಾ ವಾರಿಯರ್ಸ್ ಡೆಲ್ಲಿ ಎಸ್‌ಜಿ ಪೈಪರ್ಸ್ ಅನ್ನು ೪-೦ ಗೋಲುಗಳಿಂದ ಸೋಲಿಸಿತು.  ಪೆನಾಲ್ಟಿ ಕಾರ್ನರ್‌ಗಳಿಂದ ಗಳಿಸಿದ ಎರಡು ಗೋಲುಗಳಿಗಾಗಿ ಯಿಬ್ಬಿ ಜಾನ್ಸೆನ್ ಪಂದ್ಯಶ್ರೇಷ್ಠ ಪ್ರಶಸ್ತಿಯನ್ನು ಗೆದ್ದರು.  ಮತ್ತೊಂದೆಡೆ, ರೂರ್ಕೆಲಾದಲ್ಲಿಂದು ನಡೆಯುವ .ಪುರುಷರ ಹಾಕಿ ಇಂಡಿಯಾ ಲೀಗ್ ಪಂದ್ಯದಲ್ಲಿ  ತಮಿಳುನಾಡು ಡ್ರಾಗನ್ಸ್, ದೆಹಲಿ ಎಸ್‌ಜಿ ಪೈಪರ್ಸ್ ಮುಖಾಮುಖಿಯಾಗಲಿವೆ. ಪಂದ್ಯ ರಾತ್ರಿ ೦೮:೧೫ ಕ್ಕೆ ಆರಂಭವಾಗಲಿದೆ  ನಿನ್ನೆ ಬಿರ್ಸಾ ಮುಂಡಾ ಹಾಕಿ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಹೈದರಾಬಾದ್ ತೂಫ್ಯಾನ್ಸ್ , ವೇದಾಂತ ಕಳಿಂಗ ಲ್ಯಾನ್ಸರ್ಸ್ ವಿರುದ್ಧ ೫-೧ ಗೋಲುಗಳ ಜಯ ಸಾಧಿಸಿತು. ಈ ಗೆಲುವಿನೊಂದಿಗೆ, ತೂಫ್ಯಾನ್ಸ್ ಅಂಕಪಟ್ಟಿಯಲ್ಲಿ ಎರಡನೇ ಸ್ಥಾನಕ್ಕೆ ಏರಿತು.

<><*<><>*><>

ಮುಂಬೈನ ವಾಂಖೆಡೆ ಕ್ರೀಡಾಂಗಣದ ೫೦ನೇ ವಾರ್ಷಿಕೋತ್ಸವದ ಸಂಭ್ರಮಾಚರಣೆಗೆ ಮುಂಬೈ ಕ್ರಿಕೆಟ್ ಸಂಸ್ಥೆ - ಎಂಸಿಎ ನಿನ್ನೆ ಚಾಲನೆ ನೀಡಿದೆ. ನಿನ್ನೆ ನಡೆದ ಕಾರ್ಯಕ್ರಮದಲ್ಲಿ ಮುಂಬೈ ಮೂಲದ ದೇಶ ಕಂಡ ಶ್ರೇಷ್ಠ ಕ್ರಿಕೆಟಿಗರಾದ ಸುನೀಲ್ ಗವಾಸ್ಕರ್, ಮಾಜಿ ಆಟಗಾರ ವಿನೋದ್ ಕಾಂಬ್ಳೆ ಅವರನ್ನು ಎಂಸಿಎ ಅಧ್ಯಕ್ಷ ಅಜಿಂಕ್ಯ ನಾಯಕ್ ಸ್ಮರಣಿಕೆ ನೀಡಿ ಸನ್ಮಾನಿಸಿದರು. ಸಂಭ್ರಮಾಚರಣೆಯ ಭಾಗವಾಗಿ ದೇಶೀಯ ಹಾಗೂ ಅಂತರಾಷ್ಟ್ರೀಯ ಮಟ್ಟದಲ್ಲಿ ಮುಂಬೈ ನಗರ ತಂಡವನ್ನು ಪ್ರತಿನಿಧಿಸಿದೆ. ಪುರುಷ ಹಾಗೂ ಮಹಿಳಾ ಆಟಗಾರರನ್ನು ಸನ್ಮಾನಿಸಲಾಗುವುದು. ಸಂಭ್ರಮಾಚರಣೆ ಪ್ರಧಾನ ಕಾರ್ಯಕ್ರಮ ಇದೆ ೧೯ ರಂದು ವಾಂಖೆಡೆ ಕ್ರೀಡಾಂಗಣದಲ್ಲಿ ನಡೆಯಲಿದೆ.

<><*<><>*><>

ದೆಹಲಿ ವಿಧಾನಸಭಾ ಚುನಾವಣೆ ಮುಸ್ತಾಫಬಾದ್ ಕ್ಷೇತ್ರದಿಂದ ಬಿಜೆಪಿ ತನ್ನ ಅಭ್ಯರ್ಥಿಯನ್ನು ಘೋಷಿಸಿದ್ದು, ದೆಹಲಿ ಬಿಜೆಪಿ ಶಾಸಕ ಮೋಹನ್ ಸಿಂಗ್ ಬಿಷ್ತ್ ಈ ಕ್ಷೇತ್ರದಿಂದ ಕಣಕ್ಕಿಳಿಯಲಿದ್ದಾರೆ. ಒಟ್ಟು ೭೦ ವಿಧಾನಸಭಾ ಕ್ಷೇತ್ರಗಳಲ್ಲಿ ಬಿಜೆಪಿ ಈವರೆಗೆ ೫೮ ಕ್ಷೇತ್ರಗಳಿಗೆ ತಮ್ಮ ಅಭ್ಯರ್ಥಿಯನ್ನು ಘೋಷಿಸಿದೆ.

<><*<><>*><>

ಇಂದು ಕೊಚ್ಚಿಯ ಜವಾಹರಲಾಲ್ ನೆಹರು ಕ್ರೀಡಾಂಗಣದಲ್ಲಿ ನಡೆಯುವ ಇಂಡಿಯನ್ ಸೂಪರ್ ಲೀಗ್ ಫುಟ್‌ಬಾಲ್ ಪಂದ್ಯದಲ್ಲಿ, ಕೇರಳ ಬ್ಲಾಸ್ಟರ್ಸ್ ಎಫ್‌ಸಿ ತಂಡ ಒಡಿಶಾ ಎಫ್‌ಸಿ ತಂಡವನ್ನು ಎದುರಿಸಲಿದೆ. ಪಂದ್ಯ ಸಂಜೆ ೦೭:೩೦ ಕ್ಕೆ ಪ್ರಾರಂಭವಾಗಲಿದೆ. ಮುಂಬೈ ಫುಟ್‌ಬಾಲ್ ಅರೆನಾದಲ್ಲಿ ನಿನ್ನೆ ನಡೆದ ಪಂದ್ಯದಲ್ಲಿ, ಜಮ್ಶೆಡ್‌ಪುರ ಎಫ್‌ಸಿ ತಂಡ ಆತಿಥೇಯ ಮುಂಬೈ ಸಿಟಿ ಎಫ್‌ಸಿ ತಂಡವನ್ನು ೩-೦ ಗೋಲುಗಳಿಂದ ಸೋಲಿಸಿತು.

<><*<><>*><>

ವಿದೇಶಾಂಗ ವ್ಯವಹಾರಗಳ ಸಚಿವ ಡಾ. ಎಸ್. ಜೈಶಂಕರ್ ಇಂದಿನಿಂದ ಎರಡು ದಿನಗಳ ಸ್ಪೇನ್ ಪ್ರವಾಸ ಕೈಗೊಳ್ಳಲಿದ್ದಾರೆ. ವಿದೇಶಾಂಗ ವ್ಯವಹಾರಗಳ ಸಚಿವರಾಗಿ ಸ್ಪೇನ್‌ಗೆ ಅವರು ಕೈಗೊಳ್ಳುತ್ತಿರುವ ಮೊದಲ ಭೇಟಿ ಇದಾಗಿದೆ. ಭೇಟಿಯ ಸಮಯದಲ್ಲಿ ಅವರು, ಸ್ಪೇನ್‌ನ ನಾಯಕರನ್ನು ಭೇಟಿಯಾಗಲಿದ್ದು, ತಮ್ಮ ಸಹವರ್ತಿ ಮ್ಯಾನ್ಯೂವಲ್ ಅಲ್ಬರೇಸ್ ಅವರೊಂದಿಗೆ ಪರಸ್ಪರ ಹಿತಾಸಕ್ತಿಯ ಪ್ರಾದೇಶಿಕ ಹಾಗೂ ಜಾಗತಿಕ ವಿಷಯಗಳ ದ್ವಿಪಕ್ಷೀಯ ಮಾತುಕತೆ ನಡೆಸಲಿದ್ದಾರೆ. ಪ್ರವಾಸದ ಭಾಗವಾಗಿ ಅವರು, ೯ನೇ ವಾರ್ಷಿಕ ಸ್ಪೇನ್ ರಾಯಭಾರಿಗಳ ಸಮ್ಮೇಳನವನ್ನು ಉದ್ದೇಶಿಸಿ ಮಾತನಾಡಲಿದ್ದಾರೆ. ಇದರ ಜೊತೆಗೆ ಅಲ್ಲಿರುವ ಭಾರತೀಯ ಸಮುದಾಯವನ್ನು ಭೇಟಿಯಾಗಲಿದ್ದಾರೆ.

<><*<> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <>*><>

<><*<>ನಮ್ಮ ಮುಂದಿನ ವಾತಾ ಪ್ರಸಾರ ಮಧ್ಯಾಹ್ನ ೨.೩೦ ಕ್ಕೆ <>*><>